# ಕೆಂಪಾದವೋ.. ಎಲ್ಲ ಕೆಂಪಾದವೋ..



■ ಕೇಶವ ಕುಡ್ಲ

**ಮೇ** ತಿಂಗಳು ಬಂತೆಂದರೆ ಅದು 'ಗುಲ್‌ಮೊಹರ್'ನದೇ ಕಾಲ...

'ಗುಲ್‌ಮೊಹರ್' ಕವಿಗಳ ಮನ ಗೆದ್ದ ಹೂವು. ಗುಲ್‌ಮೊಹರಿನ ಸೌಂದರ್ಯದ ಬಗೆಗಿನ ಪದ್ಯಗಳಿಗೂ, ಘಜಲ್‌ಗಳಿಗೂ, ಶಯರಿಗಳಿಗೂ, ಹೈಕುಗಳಿಗೂ ಕೊರತೆ ಇಲ್ಲ. ಇಂಗ್ಲಿಷ್ ಆಗಲೀ, ಹಿಂದಿಯಾಗಲಿ, ಕನ್ನಡವಾಗಲೀ ಅಥವಾ ಯಾವುದೇ ಭಾರತೀಯ ಭಾಷೆಯಾಗಲಿ ಅಲ್ಲಿ ಸಾಹಿತ್ಯದ ತುಂಬ ಗುಲ್‌ಮೊಹರಿನದೇ ಬಣ್ಣದ ಓಕುಳಿ. ಗುಲ್‌ಮೊಹರಿನ ರಸ್ತೆಗಳಲ್ಲಿ ಕೈ ಕೈ ಹಿಡಿದು ನಡೆಯುವುದಾಗಲಿ, ಅದರ ಕೆಳಗಿನ ಬೆಂಚಿನಲ್ಲಿ ನಲ್ಲೆಯೊಡನೆ ಕುಳಿತುಕೊಳ್ಳುವುದಾಗಲಿ ಅದೊಂದು ಅದ್ಭುತ ಸುಖಾನುಭೂತಿ!

ವಸಂತ ಮಾಸ ಕಳೆದು ಏಪ್ರಿಲ್ ಬಂದರೆ ಗುಲ್‌ಮೊಹರ್‌ನ ಎಲೆ ಉದುರಲು ಆರಂಭ. ಜೊತೆ ಜೊತೆಯಲ್ಲೆ ಹಸಿರು ಬಣ್ಣದ ಮೊಗ್ಗುಗಳು ಆವಿರ್ಭವಿಸುತ್ತವೆ. ಏಪ್ರಿಲ್ ಕೊನೆಯಾಗುವಾಗ ಮೆಲ್ಲನೆ ಬಿರಿಯುವ ಕುಸುಮದಳಗಳು. ಮೇ ಬಂತೆಂದರೆ ಮುಗಿಯಿತು ಮರದ ಎಲೆಗಳೆಲ್ಲ ಖಾಲಿ, ಅಲ್ಲೆಲ್ಲ ಕೆಂಪು ಹೂಗಳದ್ದೇ ದರ್ಬಾರ್.

ಕೆಂಪಿನಲ್ಲೂ ಸ್ವಲ್ಪ ವೈವಿಧ್ಯತೆಯಿದೆ. ಹಲವೆಡೆ ಅಚ್ಚಗೆಂಪಿನ ಜೊತೆಗೆ ಕನಕಾಂಬರದ ಬಣ್ಣದ ಹೂಗಳು ಕಂಡರೆ, ಕೆಲವೆಡೆ ನಸುಹಳದಿಯ ಹೂಗಳೂ ಪ್ರತ್ಯಕ್ಷವಾಗಿರುತ್ತವೆ. ಈ ಹೂವಿನಲ್ಲಿ ಐದು ದಳಗಳಿದ್ದು ಒಂದೊಂದು ಸುಮಾರು ಮೂರು ಇಂಚುಗಳಷ್ಟು ಉದ್ದನಾಗಿದ್ದು ಮೇಲ್ಮುಖವಾಗಿರುತ್ತವೆ. ನಾಲ್ಕು ದಳಗಳು ಕಡುಗೆಂಪಿನಲ್ಲಿ ಮೋಹಕವಾಗಿದ್ದರೆ ನಡುವಿನಲ್ಲೊಂದು ಐದನೆಯ ದಳ ಇತರ ದಳಗಳಿಗಿಂತ ಭಿನ್ನವಾಗಿದ್ದು ಉದ್ದಕ್ಕೂ ಅಗಲಕ್ಕೂ ಇರುತ್ತದೆ. ಜೊತೆಗೆ ಅದರ ಮೇಲೆಲ್ಲ ಹಳದಿ ಬಿಳಿಯ ಚಿತ್ತಾರ.

ಈ ಮರಕ್ಕೆ ಉಷ್ಣವಲಯ ಅಥವ ಸಮಶೀತೋಷ್ಣ ವಲಯದ ಹವಾಮಾನವೆಂದರೆ ಬಲು ಸಂತೋಷ. ಸ್ವಲ್ಪ ಬಿಸಿ ವಾತಾವರಣ ಮತ್ತು ಒಂದಷ್ಟು ತೇವಾಂಶ ಇದ್ದರೆ ಇದಕ್ಕೆ ಬಲು ಅಪ್ಯಾಯಮಾನ. ಮಡಗಾಸ್ಕರ್ ಮೂಲದ ಇದು ಕೆರಿಬಿಯನ್ ದ್ವೀಪ, ಅಮೆರಿಕ, ತೈವಾನ್, ಚೀನಾ ಮೊದಲಾದ ದೇಶಗಳನ್ನು ಹಾದು ನಮ್ಮ ದೇಶಕ್ಕೆ ಹತ್ತೊಂಬತ್ತನೆ ಶತಮಾನದಲ್ಲಿ ಬಂದ ಸೊಸೆ! ಪ್ರಪಂಚದ ಅತ್ಯಂತ ಮನಮೋಹಕ ಮತ್ತು ವರ್ಣರಂಜಿತ ಹೂವೆಂಬ ಅಭಿದಾನ ಗುಲ್‌ಮೊಹರಿಗಿದೆ. ಮೇ ತಿಂಗಳಲ್ಲಿ ಹೂ ಅರಳಿಸಿಕೊಳ್ಳುವುದರಿಂದ 'ಮೇ ಫ್ಲವರ್' ಎಂಬ ಉಪಾಧಿಯೂ ಇದೆ.

ಸುಮಾರು 30–35 ಅಡಿ ಎತ್ತರಕ್ಕೆ ಬೆಳೆಯುತ್ತದಾದರೂ ಅತ್ಯಂತ ದುರ್ಬಲವಾದ ಇದರ ಕಾಂಡ ಯಾವುದೇ ರೀತಿಯ ಉಪಯೋಗಕ್ಕೂ ಬರುವುದಿಲ್ಲ. ಮಾರ್ಗದ ಬದಿಯ ನೆರಳಿಗಾಗಿ ಹೆಚ್ಚಾಗಿ ಬೆಳೆಯುತ್ತಾರಾದರೂ ಉದ್ಯಾನವನಗಳ ಅಂದ ಹೆಚ್ಚಿಸುವುದರಲ್ಲಿ ಇದು ಮಹತ್ವದ ಪಾತ್ರ ವಹಿಸುತ್ತದೆ.

